**ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ**
**ನಿರ್ವಾಚನ ನಿಲಯ,ಶೇಷಾದ್ರಿ ರಸ್ತೆ, ಬೆಂಗಳೂರು**-560 001.
**ದೂರವಾಣಿ**- 080-22224212

**ಸಂಖ್ಯೆ:**DPAR 07 CHULOSA (MC) 2024 **ದಿನಾಂಕ:** 04.05.2024

# ಪತ್ರಿಕ ಪ್ರಕಟಣೆ

1. **ವೇಳಾಪಟ್ಟಿ:**

ಲೋಕಸಭಾ ಸಾರ್ವತ್ರಿಕ ಚುನಾವಣೆ- 2024 ರ 3 ನೇ ಹಂತದಲ್ಲಿ ಕರ್ನಾಟಕ ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಸಾರ್ವತ್ರಿಕ ಚುನಾವಣೆ ಮತ್ತು 36 ಸುರಪುರ (ST) ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆಯ ಮತದಾನ **ದಿನಾಂಕ:07.05.2024** ರಂದು ಏಕಕಾಲದಲ್ಲಿ ನಡೆಯಲಿದೆ. ಈ ಚುನಾವಣೆಗಳ ವೇಳಾಪಟ್ಟಿಯನ್ನು ಈ ಕೆಳಗೆ ನೀಡಲಾಗಿದೆ:

**a. 3ನೇ ಹಂತದ ಲೋಕಸಭಾ ಸಾರ್ವತ್ರಿಕ ಚುನಾವಣೆ- 2024ರ ವೇಳಾಪಟ್ಟಿ:**

| ಮತದಾನ ಕಾರ್ಯಕ್ರಮಗಳು | ಹಂತ - 3 | ಲೋ.ಸ.ಕ್ಷೇ. | ಲೋ.ಸ.ಕ್ಷೇ. ಹೆಸರು | ಮೀಸಲು |
|---|---|---|---|---|
| **ಮತದಾನ ನಡೆಯುವ ಲೋಕಸಭಾ ಕ್ಷೇತ್ರಗಳ ಸಂಖ್ಯೆ** | **14** | 1 | ಚಿಕ್ಕೋಡಿ | GEN |
| | | 2 | ಬೆಳಗಾವಿ | GEN |
| ಅಧಿಸೂಚನೆ ದಿನಾಂಕ: | 12.04.2024 | 3 | ಬಾಗಲಕೋಟೆ | GEN |
| ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ: | 19.04.2024 | 4 | ಬಿಜಾಪುರ | SC |
| ನಾಮಪತ್ರ ಪರಿಶೀಲನೆ ದಿನಾಂಕ: | 20.04.2024 | 5 | ಗುಲ್ಬರ್ಗ | SC |
| ನಾಮಪತ್ರ ಹಿಂಪಡೆಯಲು ಕೊನೆಯ ದಿನಾಂಕ: | 22.04.2024 | 6 | ರಾಯಚೂರು | ST |
| **ಮತದಾನದ ದಿನಾಂಕ:** | **07.05.2024** | 7 | ಬೀದರ್ | GEN |
| ಮತ ಎಣಿಕೆಯ ದಿನಾಂಕ: | 04.06.2024 | 8 | ಕೊಪ್ಪಳ | GEN |
| ಚುನಾವಣೆ ಪ್ರಕ್ರಿಯೆ ಮುಗಿಯುವ ದಿನಾಂಕ: | 06.06.2024 | 9 | ಬಳ್ಳಾರಿ | ST |
| | | 10 | ಹಾವೇರಿ | GEN |
| | | 11 | ಧಾರವಾಡ | GEN |
| | | 12 | ಉತ್ತರ ಕನ್ನಡ | GEN |
| | | 13 | ದಾವಣಗೆರೆ | GEN |
| | | 14 | ಶಿವಮೊಗ್ಗ | GEN |

**b. 36-ಸುರಪುರ(ST) ವಿಧಾನಸಭಾ ಕ್ಷೇತ್ರಕ್ಕೆ ನಡೆಯುವ ಉಪ ಚುನಾವಣೆಯ ವೇಳಾಪಟ್ಟಿ.**

| ಮತದಾನ ಕಾರ್ಯಕ್ರಮಗಳು | ಹಂತ - 3 |
|---|---|
| ಅಧಿಸೂಚನೆ ದಿನಾಂಕ: | 12.04.2024 |
| ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ: | 19.04.2024 |
| ನಾಮಪತ್ರ ಪರಿಶೀಲನೆ ದಿನಾಂಕ: | 20.04.2024 |
| ನಾಮಪತ್ರ ಹಿಂಪಡೆಯಲು ಕೊನೆಯ ದಿನಾಂಕ: | 22.04.2024 |
| ಮತದಾನದ ದಿನಾಂಕ: | 07.05.2024 |
| ಮತ ಎಣಿಕೆಯ ದಿನಾಂಕ: | 04.06.2024 |
| ಚುನಾವಣೆ ಪ್ರಕ್ರಿಯೆ ಮುಗಿಯುವ ದಿನಾಂಕ: | 06.06.2024 |

2. **ಕಣದಲ್ಲಿರುವ ಅಭ್ಯರ್ಥಿಗಳು:**

a. **3 ನೇ ಹಂತದ ಲೋಕಸಭಾ ಕ್ಷೇತ್ರಗಳ ಕಣದಲ್ಲಿರುವ ಅಭ್ಯರ್ಥಿಗಳು**

i. **ಲೋಕಸಭಾ ಕ್ಷೇತ್ರವಾರು ಕಣದಲ್ಲಿರುವ ಅಭ್ಯರ್ಥಿಗಳು:**

| PC No. | ಲೋ.ಸ.ಕ್ಷೇ.ಹೆಸರು | ಕಣದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ | | | |
|---|---|---|---|---|---|
| | | ಪುರುಷ | ಮಹಿಳೆ | ಇತರೆ | ಒಟ್ಟು |
| 1 | ಚಿಕ್ಕೋಡಿ | 17 | 1 | 0 | 18 |
| 2 | ಬೆಳಗಾವಿ | 13 | 0 | 0 | 13 |
| 3 | ಬಾಗಲಕೋಟೆ | 20 | 2 | 0 | 22 |
| 4 | ಬಿಜಾಪುರ | 6 | 2 | 0 | 8 |
| 5 | ಗುಲ್ಬರ್ಗ | 12 | 2 | 0 | 14 |
| 6 | ರಾಯಚೂರು | 7 | 1 | 0 | 8 |
| 7 | ಬೀದರ್ | 18 | 0 | 0 | 18 |
| 8 | ಕೊಪ್ಪಳ | 17 | 2 | 0 | 19 |
| 9 | ಬಳ್ಳಾರಿ | 10 | 0 | 0 | 10 |
| 10 | ಹಾವೇರಿ | 11 | 3 | 0 | 14 |
| 11 | ಧಾರವಾಡ | 17 | 0 | 0 | 17 |
| 12 | ಉತ್ತರ ಕನ್ನಡ | 12 | 1 | 0 | 13 |
| 13 | ದಾವಣಗೆರೆ | 25 | 5 | 0 | 30 |
| 14 | ಶಿವಮೊಗ್ಗ | 21 | 2 | 0 | 23 |
| **ಹಂತ 3** | | **206** | **21** | **0** | **227** |

ii. **ಪಕ್ಷವಾರು ಕಣದಲ್ಲಿರುವ ಅಭ್ಯರ್ಥಿಗಳು:**

| ಪಕ್ಷಗಳ ಹೆಸರು | ಕಣದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ | | | |
|---|---|---|---|---|
| | ಪುರುಷ | ಮಹಿಳೆ | ಇತರೆ | ಒಟ್ಟು |
| **ಮಾನ್ಯತೆ ಪಡೆದ ರಾಷ್ಟ್ರೀಯ ಪಕ್ಷಗಳು** | | | | |
| ಬಹುಜನ ಸಮಾಜ ಪಕ್ಷ | 9 | 0 | 0 | 9 |
| ಭಾರತೀಯ ಜನತಾ ಪಕ್ಷ | 13 | 1 | 0 | 14 |
| ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ | 9 | 5 | 0 | 14 |
| **ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳು** | | | | |
| ನೋಂದಾಯಿತ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳು | 69 | 4 | 0 | 73 |
| **ಸ್ವತಂತ್ರ** | | | | |
| ಸ್ವತಂತ್ರ | 106 | 11 | 0 | 117 |
| **ಹಂತ 3** | **206** | **21** | **0** | **227** |

b. **36-ಸುರಪುರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಕಣದಲ್ಲಿರುವ ಅಭ್ಯರ್ಥಿಗಳು:**

| ಪಕ್ಷ | ಪುರುಷ | ಮಹಿಳೆ | ಒಟ್ಟು |
|---|---|---|---|
| ಭಾರತೀಯ ಜನತಾ ಪಕ್ಷ | 1 | 0 | 1 |
| ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ | 1 | 0 | 1 |
| ಸ್ವತಂತ್ರ | 4 | 0 | 4 |
| **ಒಟ್ಟು** | **6** | **0** | **6** |

## 3. ಹಂತ 3 ರ ಚುನಾವಣೆಯ ಅಂತಿಮ ಮತದಾರರ ಪಟ್ಟಿ ವಿವರ:

### a. 19.04.2024 ರಂತೆ ಮತದಾರರು :

| ಮತದಾರರ ಪಟ್ಟಿಯ ವಿವರ | ದಿನಾಂಕ: 19.04.2024 ರವರೆಗೆ | | | |
|---|---|---|---|---|
| | ಪುರುಷ | ಮಹಿಳೆ | ತೃತೀಯ ಲಿಂಗ | ಒಟ್ಟು |
| ಸಾಮಾನ್ಯ ಮತದಾರರು | 1,29,48,978 | 1,29,66,570 | 1,945 | 2,59,17,493 |
| ಸೇವಾ ಮತದಾರರು | 34,428 | 1,037 | - | 35,465 |
| ಒಟ್ಟು ಮತದಾರರು (ಸೇವಾ ಮತದಾರರನ್ನು ಒಳಗೊಂಡಂತೆ) | 1,29,83,406 | 1,29,67,607 | 1,945 | 2,59,52,958 |
| ಸಾಗರೋತ್ತರ ಮತದಾರರು(ಸಾಮಾನ್ಯ ಮತದಾರರನ್ನು ಒಳಗೊಂಡಂತೆ) | 339 | 79 | 0 | 418 |
| ಯುವ ಮತದಾರರು (18-19 years) | 3,78,144 | 3,12,703 | 82 | 6,90,929 |
| 85+ ಮತದಾರರು | 91,058 | 1,38,204 | 1 | 2,29,263 |
| ದಿವ್ಯಾಂಗ ಮತದಾರರು(PwDs) | 1,99,656 | 1,44,287 | 23 | 3,43,966 |
| ಅತಿ ಹೆಚ್ಚು ಮತದಾರರು ಇರುವ ಲೋಕಸಭಾ ಕ್ಷೇತ್ರ ಸಂಖ್ಯೆ:05-ಗುಲ್ಬರ್ಗ | | | | 20,98,202 |
| ಅತಿ ಕಡಿಮೆ ಮತದಾರರು ಇರುವ ಲೋಕಸಭಾ ಕ್ಷೇತ್ರ ಸಂಖ್ಯೆ: 12-ಉತ್ತರ ಕನ್ನಡ | | | | 16,41,156 |
| ಅತಿ ಹೆಚ್ಚು ಮತದಾರರು ಇರುವ ವಿಧನಸಭಾ ಕ್ಷೇತ್ರ ಸಂಖ್ಯೆ: 45- ಗುಲ್ಬರ್ಗ ಜಿಲ್ಲೆ- ಗುಲ್ಬರ್ಗ ಉತ್ತರ | | | | 3,19,262 |
| ಅತಿ ಕಡಿಮೆ ಮತದಾರರು ಇರುವ ವಿಧನಸಭಾ ಕ್ಷೇತ್ರ ಸಂಖ್ಯೆ: 76-ಹಳಿಯಾಳ ಜಿಲ್ಲೆ- ಉತ್ತರ ಕನ್ನಡ | | | | 1,85,695 |
| ಲಿಂಗಾನುಪಾತ | | | | 1002 |
| ಮತದಾರರ ಮತ್ತು ಒಟ್ಟು ಜನಸಂಖ್ಯೆಯ ಅನುಪಾತ-ಮತದಾರರ ಪಟ್ಟಿಯ ಪ್ರಕಾರ | | | | 71.8 |

### b. ಲೋಕಸಭಾ ಕ್ಷೇತ್ರವಾರು ಸಾಮಾನ್ಯ ಮತದಾರರ ಸಂಖ್ಯೆ :

| ಲೋ.ಸ. ಕ್ಷೇ ಸಂಖ್ಯೆ | ಲೋ.ಸ. ಕ್ಷೇ. ಹೆಸರು | ಪುರುಷ | ಮಹಿಳೆ | ಇತರೆ | ಒಟ್ಟು |
|---|---|---|---|---|---|
| 1 | ಚಿಕ್ಕೋಡಿ | 8,85,200 | 8,76,414 | 80 | 17,61,694 |
| 2 | ಬೆಳಗಾವಿ | 9,57,559 | 9,66,134 | 95 | 19,23,788 |
| 3 | ಬಾಗಲಕೋಟೆ | 8,95,432 | 9,10,650 | 101 | 18,06,183 |
| 4 | ಬಿಜಾಪುರ | 9,87,974 | 9,57,906 | 210 | 19,46,090 |
| 5 | ಗುಲ್ಬರ್ಗ | 10,49,959 | 10,47,961 | 282 | 20,98,202 |
| 6 | ರಾಯಚೂರು | 9,94,646 | 10,15,158 | 299 | 20,10,103 |
| 7 | ಬೀದರ್ | 9,71,424 | 9,21,435 | 103 | 18,92,962 |
| 8 | ಕೊಪ್ಪಳ | 9,19,499 | 9,46,763 | 135 | 18,66,397 |
| 9 | ಬಳ್ಳಾರಿ | 9,28,857 | 9,54,914 | 269 | 18,84,040 |
| 10 | ಹಾವೇರಿ | 9,02,119 | 8,90,572 | 83 | 17,92,774 |
| 11 | ಧಾರವಾಡ | 9,17,926 | 9,13,949 | 100 | 18,31,975 |
| 12 | ಉತ್ತರ ಕನ್ನಡ | 8,23,604 | 8,17,536 | 16 | 16,41,156 |
| 13 | ದಾವಣಗೆರೆ | 8,51,990 | 8,57,117 | 137 | 17,09,244 |
| 14 | ಶಿವಮೊಗ್ಗ | 8,62,789 | 8,90,061 | 35 | 17,52,885 |
| **ಒಟ್ಟು** | | **1,29,48,978** | **1,29,66,570** | **1,945** | **2,59,17,493** |

**c. ಲೋಕಸಭಾ ಕ್ಷೇತ್ರಗಳ ಸೇವಾ ಮತದಾರರು:**

| ಲೋ.ಸ. ಕ್ಷೇ ಸಂಖ್ಯೆ | ಲೋ.ಸ. ಕ್ಷೇ. ಹೆಸರು | ಪುರುಷ | ಮಹಿಳೆ | ಒಟ್ಟು |
|---|---|---|---|---|
| 1 | ಚಿಕ್ಕೋಡಿ | 8599 | 230 | 8,829 |
| 2 | ಬೆಳಗಾವಿ | 7680 | 278 | 7,958 |
| 3 | ಬಾಗಲಕೋಟೆ | 3807 | 100 | 3,907 |
| 4 | ಬಿಜಾಪುರ | 1852 | 34 | 1,886 |
| 5 | ಗುಲ್ಬರ್ಗ | 561 | 15 | 576 |
| 6 | ರಾಯಚೂರು | 330 | 8 | 338 |
| 7 | ಬೀದರ್ | 1355 | 47 | 1,402 |
| 8 | ಕೊಪ್ಪಳ | 596 | 23 | 619 |
| 9 | ಬಳ್ಳಾರಿ | 417 | 15 | 432 |
| 10 | ಹಾವೇರಿ | 1577 | 43 | 1,620 |
| 11 | ಧಾರವಾಡ | 1969 | 71 | 2,040 |
| 12 | ಉತ್ತರ ಕನ್ನಡ | 4433 | 132 | 4,565 |
| 13 | ದಾವಣಗೆರೆ | 553 | 12 | 565 |
| 14 | ಶಿವಮೊಗ್ಗ | 699 | 29 | 728 |
| **ಒಟ್ಟು** | | **34,428** | **1,037** | **35,465** |

**d. ಲೋಕಸಭಾ ಕ್ಷೇತ್ರಗಳ ಯುವ ಮತದಾರರು (18-19 ವರ್ಷ):**

| ಲೋ.ಸ. ಕ್ಷೇ ಸಂಖ್ಯೆ | ಲೋ.ಸ. ಕ್ಷೇ. ಹೆಸರು | ಪುರುಷ | ಮಹಿಳೆ | ಇತರೆ | ಒಟ್ಟು |
|---|---|---|---|---|---|
| 1 | ಚಿಕ್ಕೋಡಿ | 32,121 | 26,048 | 7 | 58,176 |
| 2 | ಬೆಳಗಾವಿ | 29,399 | 24,513 | 10 | 53,922 |
| 3 | ಬಾಗಲಕೋಟೆ | 28,770 | 24,772 | 4 | 53,546 |
| 4 | ಬಿಜಾಪುರ | 25,280 | 18,886 | 3 | 44,169 |
| 5 | ಗುಲ್ಬರ್ಗ | 24,030 | 18,149 | 6 | 42,185 |
| 6 | ರಾಯಚೂರು | 27,201 | 20,624 | 10 | 47,835 |
| 7 | ಬೀದರ್ | 25,998 | 18,839 | 3 | 44,840 |
| 8 | ಕೊಪ್ಪಳ | 29,481 | 22,608 | 6 | 52,095 |
| 9 | ಬಳ್ಳಾರಿ | 33,121 | 27,872 | 13 | 61,006 |
| 10 | ಹಾವೇರಿ | 30,022 | 27,550 | 5 | 57,577 |
| 11 | ಧಾರವಾಡ | 25,005 | 22,194 | 5 | 47,204 |
| 12 | ಉತ್ತರ ಕನ್ನಡ | 22,244 | 20,157 | 3 | 42,404 |
| 13 | ದಾವಣಗೆರೆ | 23,405 | 20,630 | 4 | 44,039 |
| 14 | ಶಿವಮೊಗ್ಗ | 22,067 | 19,861 | 3 | 41,931 |
| **ಒಟ್ಟು** | | **3,78,144** | **3,12,703** | **82** | **6,90,929** |

## e. ಲೋಕಸಭಾ ಕ್ಷೇತ್ರಗಳ 85 ವರ್ಷ ಮೇಲ್ಪಟ್ಟ ಮತದಾರರು:

| ಲೋ.ಸ. ಕ್ಷೇ ಸಂಖ್ಯೆ | ಲೋ.ಸ. ಕ್ಷೇ. ಹೆಸರು | ಪುರುಷ | ಮಹಿಳೆ | ಇತರೆ | ಒಟ್ಟು |
|---|---|---|---|---|---|
| 1 | ಚಿಕ್ಕೋಡಿ | 8,783 | 12,553 | 0 | 21,336 |
| 2 | ಬೆಳಗಾವಿ | 8,709 | 11,803 | 0 | 20,512 |
| 3 | ಬಾಗಲಕೋಟೆ | 5,231 | 8,233 | 0 | 13,464 |
| 4 | ಬಿಜಾಪುರ | 7,096 | 10,061 | 0 | 17,157 |
| 5 | ಗುಲ್ಬರ್ಗ | 6,981 | 11,210 | 1 | 18,192 |
| 6 | ರಾಯಚೂರು | 4,901 | 9,845 | 0 | 14,746 |
| 7 | ಬೀದರ್ | 7,735 | 11,832 | 0 | 19,567 |
| 8 | ಕೊಪ್ಪಳ | 4,039 | 8,870 | 0 | 12,909 |
| 9 | ಬಳ್ಳಾರಿ | 5,129 | 8,258 | 0 | 13,387 |
| 10 | ಹಾವೇರಿ | 6,293 | 9,235 | 0 | 15,528 |
| 11 | ಧಾರವಾಡ | 8,254 | 10,372 | 0 | 18,626 |
| 12 | ಉತ್ತರ ಕನ್ನಡ | 6,242 | 9,415 | 0 | 15,657 |
| 13 | ದಾವಣಗೆರೆ | 5,451 | 7,403 | 0 | 12,854 |
| 14 | ಶಿವಮೊಗ್ಗ | 6,214 | 9,114 | 0 | 15,328 |
| **ಒಟ್ಟು** | | **91,058** | **1,38,204** | **1** | **2,29,263** |

## f. ಲೋಕಸಭಾ ಕ್ಷೇತ್ರಗಳ ದಿವ್ಯಾಂಗ ಮತದಾರರು (PwDs):

| ಲೋ.ಸ. ಕ್ಷೇ ಸಂಖ್ಯೆ | ಲೋ.ಸ. ಕ್ಷೇ. ಹೆಸರು | ಪುರುಷ | ಮಹಿಳೆ | ಇತರೆ | ಒಟ್ಟು |
|---|---|---|---|---|---|
| 1 | ಚಿಕ್ಕೋಡಿ | 14,401 | 9,973 | 0 | 24,374 |
| 2 | ಬೆಳಗಾವಿ | 14,647 | 9,788 | 6 | 24,441 |
| 3 | ಬಾಗಲಕೋಟೆ | 15,525 | 11,312 | 1 | 26,838 |
| 4 | ಬಿಜಾಪುರ | 12,664 | 9,139 | 0 | 21,803 |
| 5 | ಗುಲ್ಬರ್ಗ | 12,684 | 9,564 | 3 | 22,251 |
| 6 | ರಾಯಚೂರು | 13,077 | 10,101 | 0 | 23,178 |
| 7 | ಬೀದರ್ | 17,396 | 12,160 | 0 | 29,556 |
| 8 | ಕೊಪ್ಪಳ | 15,022 | 10,812 | 2 | 25,836 |
| 9 | ಬಳ್ಳಾರಿ | 13,485 | 11,617 | 6 | 25,108 |
| 10 | ಹಾವೇರಿ | 16,849 | 10,999 | 1 | 27,849 |
| 11 | ಧಾರವಾಡ | 14,772 | 11,012 | 3 | 25,787 |
| 12 | ಉತ್ತರ ಕನ್ನಡ | 14,831 | 9,485 | 0 | 24,316 |
| 13 | ದಾವಣಗೆರೆ | 13,378 | 9,985 | 1 | 23,364 |
| 14 | ಶಿವಮೊಗ್ಗ | 10,925 | 8,340 | 0 | 19,265 |
| **ಒಟ್ಟು** | | **1,99,656** | **1,44,287** | **23** | **3,43,966** |

## 4. ಮತಗಟ್ಟೆಗಳು:

### a. ಮುಖ್ಯ ಮತಗಟ್ಟೆಗಳು:

| ಲೋ.ಸ. ಕ್ಷೇ ಸಂಖ್ಯೆ | ಲೋ.ಸ. ಕ್ಷೇ. ಹೆಸರು | ನಗರ | ಗ್ರಾಮಾಂತರ | ಒಟ್ಟು |
|---|---|---|---|---|
| 1 | ಚಿಕ್ಕೋಡಿ | 419 | 1,477 | 1,896 |
| 2 | ಬೆಳಗಾವಿ | 813 | 1,273 | 2,086 |
| 3 | ಬಾಗಲಕೋಟೆ | 574 | 1,372 | 1,946 |
| 4 | ಬಿಜಾಪುರ | 578 | 1,507 | 2,085 |
| 5 | ಗುಲ್ಬರ್ಗ | 914 | 1,252 | 2,166 |
| 6 | ರಾಯಚೂರು | 627 | 1,576 | 2,203 |
| 7 | ಬೀದರ್ | 402 | 1,622 | 2,024 |
| 8 | ಕೊಪ್ಪಳ | 460 | 1,582 | 2,042 |
| 9 | ಬಳ್ಳಾರಿ | 793 | 1,179 | 1,972 |
| 10 | ಹಾವೇರಿ | 512 | 1,470 | 1,982 |
| 11 | ಧಾರವಾಡ | 988 | 905 | 1,893 |
| 12 | ಉತ್ತರ ಕನ್ನಡ | 358 | 1,619 | 1,977 |
| 13 | ದಾವಣಗೆರೆ | 539 | 1,407 | 1,946 |
| 14 | ಶಿವಮೊಗ್ಗ | 644 | 1,395 | 2,039 |
| **ಒಟ್ಟು** | | **8,621** | **19,636** | **28,257** |

### b. ಮುಖ್ಯ ಮತ್ತು ಉಪ ಮತಗಟ್ಟೆಗಳು:

| ಲೋ.ಸ. ಕ್ಷೇ ಸಂಖ್ಯೆ | ಲೋ.ಸ. ಕ್ಷೇ. ಹೆಸರು | ಮುಖ್ಯ ಮತಗಟ್ಟೆಗಳು | ಉಪ ಮತಗಟ್ಟೆಗಳು | ಒಟ್ಟು |
|---|---|---|---|---|
| 1 | ಚಿಕ್ಕೋಡಿ | 1,896 | 0 | 1,896 |
| 2 | ಬೆಳಗಾವಿ | 2,086 | 0 | 2,086 |
| 3 | ಬಾಗಲಕೋಟೆ | 1,946 | 0 | 1,946 |
| 4 | ಬಿಜಾಪುರ | 2,085 | 1 | 2,086 |
| 5 | ಗುಲ್ಬರ್ಗ | 2,166 | 0 | 2,166 |
| 6 | ರಾಯಚೂರು | 2,203 | 0 | 2,203 |
| 7 | ಬೀದರ್ | 2,024 | 0 | 2,024 |
| 8 | ಕೊಪ್ಪಳ | 2,042 | 3 | 2,045 |
| 9 | ಬಳ್ಳಾರಿ | 1,972 | 0 | 1,972 |
| 10 | ಹಾವೇರಿ | 1,982 | 0 | 1,982 |
| 11 | ಧಾರವಾಡ | 1,893 | 8 | 1,901 |
| 12 | ಉತ್ತರ ಕನ್ನಡ | 1,977 | 0 | 1,977 |
| 13 | ದಾವಣಗೆರೆ | 1,946 | 0 | 1,946 |
| 14 | ಶಿವಮೊಗ್ಗ | 2,039 | 0 | 2,039 |
| **ಒಟ್ಟು** | | **28,257** | **12** | **28,269** |

**c. ಪ್ರಸ್ತುತ ಚುನಾವಣೆಯ ಎರಡು ಮತ್ತು ಮೂರನೆ ಹಂತದ ಒಟ್ಟು ಸಾಮಾನ್ಯ ಮತ್ತು ಸೇವ ಮತದಾರರ ವಿವರ**:

| ಹಂತ | ಮತದಾರರು | ಪುರುಷ | ಮಹಿಳೆ | ತೃತೀಯ ಲಿಂಗ | ಒಟ್ಟು | ಮತಗಟ್ಟೆಗಳು |
|---|---|---|---|---|---|---|
| 2 | ಸಾಮಾನ್ಯ | 1,44,17,530 | 1,43,87,585 | 3,067 | 2,88,08,182 | 30,602 |
| | ಸೇವಾ | 10,569 | 591 | 0 | 11,160 | |
| | ಒಟ್ಟು | 1,44,28,099 | 1,43,88,176 | 3,067 | 2,88,19,342 | |
| 3 | ಸಾಮಾನ್ಯ | 1,29,48,978 | 1,29,66,570 | 1,945 | 2,59,17,493 | 28,269 |
| | ಸೇವಾ | 34,428 | 1037 | 0 | 35,465 | |
| | ಒಟ್ಟು | 1,29,83,406 | 1,29,67,607 | 1,945 | 2,59,52,958 | |
| **ಎರಡು ಹಂತ ಸೇರಿ ಒಟ್ಟು** | | **2,73,66,508** | **2,73,54,155** | **5,012** | **5,47,25,675** | **58,871** |
| | | **44,997** | **1,628** | **0** | **46,625** | |
| | | **2,74,11,505** | **2,73,55,783** | **5,012** | **5,47,72,300** | |

**5. 36-ಸುರಪುರ ಉಪ ಚುನಾವಣೆಯ ವಿಧಾನಸಭಾ ಕ್ಷೇತ್ರ:**

**ಒಟ್ಟು ಮತದಾರರ ವಿವರ ಮತ್ತು ಮತಗಟ್ಟೆಗಳು:**

| ಮತದಾರರ ಪಟ್ಟಿ | 19.04.2024 ರಂತೆ ಮತದಾರರು | | | |
|---|---|---|---|---|
| | ಪುರುಷ | ಮಹಿಳೆ | ತೃತೀಯ ಲಿಂಗ | ಒಟ್ಟು |
| ಸಾಮಾನ್ಯ ಮತದಾರರು | 1,42,532 | 1,40,523 | 28 | 2,83,083 |
| ಸೇವಾ ಮತದಾರರು | 65 | 0 | - | 65 |
| **ಒಟ್ಟು ಮತದಾರರು( ಸೇವಾ ಮತದಾರರು ಸೇರಿದಂತೆ)** | **1,42,597** | **1,40,523** | **28** | **2,83,148** |
| ಯುವ ಮತದಾರರು (18-19 years) | 3,888 | 2,824 | 2 | 6,714 |
| 85+ ವಯಸ್ಸಿನ ಮತದಾರರು | 737 | 1,646 | 0 | 2,383 |
| ದಿವ್ಯಾಂಗ ಮತದಾರರು | 2,074 | 1,745 | 0 | 3,819 |
| ಲಿಂಗಾನುಪಾತ | | | | 986 |
| ಮತದಾರರ ಮತ್ತು ಒಟ್ಟು ಜನಸಂಖ್ಯೆಯ ಅನುಪಾತ | | | | 62.86 |
| **ಮತಗಟ್ಟೆಗಳು** | | | | **893** |

**6. ಮತ ಚಲಾಯಿಸಲು ಸಹಾಯಕ ಪರ್ಯಾಯ ದಾಖಲೆಗಳು:**

ಭಾರತ ಚುನಾವಣಾ ಆಯೋಗವು ಅನುಮೋದಿಸಿರುವಂತೆ ಮತದಾರರು ತಮ್ಮ ಮತ ಚಲಾಯಿಸುವ ಮೊದಲು ಮತದಾನ ಕೇಂದ್ರಗಳಲ್ಲಿ ಅವರ ಗುರುತಿಗಾಗಿ ಮತದಾರರ ಗುರುತಿನ ಚೀಟಿ ಅಥವಾ ಈ ಕೆಳಗಿನ ಯಾವುದಾದರೊಂದು ಪರ್ಯಾಯ ಫೋಟೋ ಗುರುತಿನ ದಾಖಲೆಯನ್ನು ತೋರಿಸುವ ಮೂಲಕ ಮತದಾನ ಮಾಡಬಹುದಾಗಿದೆ.

(i) ಆಧಾರ್ ಕಾರ್ಡ್,

(ii) MNREGA ಜಾಬ್ ಕಾರ್ಡ್,

(iii) ಬ್ಯಾಂಕ್/ಪೋಸ್ಟ್ ಆಫೀಸ್ ನೀಡಿದ ಭಾವಚಿತ್ರವಿರುವ ಪಾಸ್‌ಬುಕ್‌ಗಳು,

(iv) ಕಾರ್ಮಿಕ ಸಚಿವಾಲಯದ ಯೋಜನೆಯ ಅಡಿಯಲ್ಲಿ ನೀಡಲಾದ ಆರೋಗ್ಯ ವಿಮಾ ಸ್ಮಾರ್ಟ್ ಕಾರ್ಡ್,

(v) ಚಾಲನಾ ಪರವಾನಗಿ,

(vi) ಪ್ಯಾನ್ ಕಾರ್ಡ್,

(vii) NPR ಅಡಿಯಲ್ಲಿ RGI ನೀಡಿದ ಸ್ಮಾರ್ಟ್ ಕಾರ್ಡ್,

(viii) ಭಾರತೀಯ ಪಾಸ್‌ಪೋರ್ಟ್,

(ix) ಭಾವಚಿತ್ರ ಹೊಂದಿರುವ ಪಿಂಚಣಿಯ ದಾಖಲೆ,

(x) ಕೇಂದ್ರ / ರಾಜ್ಯ ಸರ್ಕಾರ / ಪಿಎಸ್‌ಯು / ಪಬ್ಲಿಕ್ ಲಿಮಿಟೆಡ್ ಕಂಪನಿಗಳು ಉದ್ಯೋಗಿಗಳಿಗೆ ನೀಡಿದ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿಗಳು,

(xi) MPಗಳು/MLAಗಳು/MLC ಗಳಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿಗಳು,

(xii)ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಭಾರತ ಸರ್ಕಾರ ನೀಡಿರುವ ವಿಶಿಷ್ಟ ಅಂಗವೈಕಲ್ಯ ID (UDID) ಕಾರ್ಡ್.

**7. ಅಳಿಸಲಾಗದ ಶಾಯಿ:**

ಪ್ರಸ್ತುತ ಚುನಾವಣೆಯಲ್ಲಿ ಅಳಿಸಲಾಗದ ಶಾಯಿಯನ್ನು ಮತದಾರರ ಎಡಗೈ ತೋರು ಬೆರಳಿಗೆ ಹಚ್ಚಲಾಗುತ್ತದೆ (ಚುನಾವಣಾ ನೀತಿ ಸಂಹಿತೆ 1961 ರ ನಿಯಮ 49K ಪ್ರಕಾರ).

**8. ಮತದಾನದ ದಿನದಂದು ರಜೆಯ ಘೋಷಣೆ / ಪಾವತಿಸಿದ ರಜೆ:**

ಕರ್ನಾಟಕ ಸರ್ಕಾರವು **ದಿನಾಂಕ: 30.03.2024 ರಂದು DAPR 09 HHL 2024** ರ ಅಧಿಸೂಚನೆಯನ್ನು ಹೊರಡಿಸಿದ್ದು**, 07.05.2024** ರಂದು ಮತದಾನ ನಡೆಯುವ 3ನೇ ಹಂತದ ಲೋಕಸಭಾ ಕ್ಷೇತ್ರಗಳ ಅಡಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಚೇರಿಗಳು, ಶಾಲೆಗಳು ಮತ್ತು ಕಾಲೇಜುಗಳು (ಅನುದಾನಿತ ಶಿಕ್ಷಣ ಸಂಸ್ಥೆಗಳು ಸೇರಿದಂತೆ) ಮತ್ತು ಸಾರ್ವಜನಿಕ ವಲಯದ ಉದ್ಯಮಗಳಿಗೆ ಸಾರ್ವತ್ರಿಕ ರಜೆಯನ್ನು ಘೋಷಿಸಿದೆ. ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ, ವ್ಯಾಪಾರ ಉದ್ಯಮಗಳು, ಕೈಗಾರಿಕೆಗಳು ಮತ್ತು ಇತರ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅಧಿಕಾರಿ/ಸಿಬ್ಬಂದಿಗಳು ಅಥವಾ ದಿನಗೂಲಿ ವೇತನದಲ್ಲಿ ಕೆಲಸ ಮಾಡುವ ಮತದಾರರು ತಮ್ಮ ಮತ ಚಲಾಯಿಸಲು ಅನುವು ಮಾಡಿಕೊಡಲು ಆರ್‌ಪಿ ಕಾಯ್ದೆ 1951 ರ ಸೆಕ್ಷನ್ 135 ಬಿ ಪ್ರಕಾರ ಪಾವತಿಸಿದ ರಜೆಯನ್ನು ಮಂಜೂರು ಮಾಡಲು ಆದೇಶಿಸಿದೆ. ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ 1981 ರ ಅಡಿಯಲ್ಲಿ ಸಾರ್ವತ್ರಿಕ ರಜೆಯನ್ನು ನೀಡಲಾಗುತ್ತದೆ.

**9. ಶೂನ್ಯ ಅವಧಿ (ಕೊನೆಯ 48 ಗಂಟೆಗಳು):**

- **a.** ಕ್ರಿಮಿನಲ್ ಪ್ರೊಸೀಜರ್ ಕೋಡ್**,** 1973 (CrPC) ನ ಸೆಕ್ಷನ್ 144 ರ ಅಡಿಯಲ್ಲಿ ಆದೇಶಗಳನ್ನು ಕಾನೂನುಬಾಹಿರ ಸಭೆಗಳನ್ನು ನಿಷೇಧಿಸುವುದು ಮತ್ತು ಮತದಾನದ ಮುಕ್ತಾಯಕ್ಕೆ ನಿಗದಿಪಡಿಸಿದ ಗಂಟೆಯೊಂದಿಗೆ ಕೊನೆಗೊಳ್ಳುವ ಮುಂಚಿನ 48 ಗಂಟೆಗಳ ಅವಧಿಯಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸುವುದನ್ನು ನಿಷೇಧಿಸುವ ಬಗ್ಗೆ ಆದೇಶಗಳನ್ನು ನೀಡಲಾಗಿದೆ**,** ಇದು ಚುನಾವಣೆ ನಡೆಯುವ ಪ್ರದೇಶ/ಸಂಪೂರ್ಣ ಕ್ಷೇತ್ರಕ್ಕೆ ಅನ್ವಯಿಸುತ್ತದೆ.
- **b.** ಮದ್ಯಪಾನ ಮಾರಾಟವನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ.
- **c.** ರಾಜಕೀಯ ಪ್ರಚಾರಕ್ಕಾಗಿ ಮತದಾನದ ಮುಕ್ತಾಯದ ಸಮಯದೊಂದಿಗೆ ಕೊನೆಗೊಳ್ಳುವ ಮುಂಚಿನ 48 ಗಂಟೆಗಳ ಅವಧಿಯಲ್ಲಿ ಯಾವುದೇ ಧ್ವನಿವರ್ಧಕವನ್ನು ಬಳಸಲು ನಿರ್ಬಂಧಿಸಲಾಗಿದೆ.
- **d.** ಲೋಕಸಭಾ ಕ್ಷೇತ್ರಗಳಿಗೆ ಸಾರ್ವತ್ರಿಕ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಪ್ರಚಾರದ ಅವಧಿ ಮುಗಿದ ನಂತರ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವುದೇ ಪ್ರಚಾರ ನಡೆಸುವಂತಿಲ್ಲ**,** ಕ್ಷೇತ್ರದ ಹೊರಗಿನಿಂದ ಕರೆತಂದಿರುವ ರಾಜಕೀಯ ಕಾರ್ಯಕರ್ತರು/ ಪಕ್ಷದ ಕಾರ್ಯಕರ್ತರು/ ಮೆರವಣಿಗೆ **/**ಪದಾಧಿಕಾರಿಗಳು/ ಪ್ರಚಾರ-ಕಾರ್ಯಕರ್ತರು ಮುಂತಾದವರು ಸೇರಿದಂತೆ ಆ ಕ್ಷೇತ್ರದ ಮತದಾರರಲ್ಲದ ರಾಜಕೀಯ ವ್ಯಕ್ತಿಗಳು ಕ್ಷೇತ್ರವನ್ನು ತೊರೆಯಬೇಕು.

**e.** ಆಯೋಗದ ನಿರ್ದೇಶನಗಳ ಪ್ರಕಾರ, ಮೇಲಿನ ಸೂಚನೆಗಳನ್ನು ಕೈಗೊಳ್ಳಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು, ಚುನಾವಣಾ ಆಡಳಿತ/ಪೊಲೀಸ್ ಆಡಳಿತವು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬಹುದು

- ✓ ಕಲ್ಯಾಣ ಮಂಟಪಗಳು / ಸಮುದಾಯ ಭವನಗಳು ಇತ್ಯಾದಿಗಳನ್ನು ಪರಿಶೀಲಿಸುವುದು, ಈ ಆವರಣದಲ್ಲಿ ಯಾರಾದರೂ ಹೊರಗಿನವರಿಗೆ ವಸತಿ ಕಲ್ಪಿಸಲಾಗಿದೆಯೇ ಎಂದು ಪರಿಶೀಲಿಸಬೇಕು.
- ✓ ವಸತಿಗೃಹಗಳು ಮತ್ತು ಅತಿಥಿಗೃಹಗಳನ್ನು ಪರಿಶೀಲಿಸಬೇಕು.
- ✓ ಕ್ಷೇತ್ರದ ಗಡಿಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಿ ಕ್ಷೇತ್ರದ ಹೊರಗಿನಿಂದ ಬರುವ ವಾಹನಗಳ ಚಲನವಲನದ ನಿಗಾವಹಿಸಬೇಕು.
- ✓ ಅವರು ಆಯಾ ಕ್ಷೇತ್ರದ ಮತದಾರರೇ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಲು ಅವರ ಗುರುತಿನ ಚೀಟಿಗಳನ್ನು ಪರಿಶೀಲಿಸಿಸಬೇಕು.
- ✓ ಈ ಮೇಲಿನವುಗಳನ್ನು ಅನುಸರಿಸುವ ಸಲುವಾಗಿ ಎಲ್ಲಾ ರಾಜಕೀಯ ಪಕ್ಷಗಳು, ಅಭ್ಯರ್ಥಿಗಳು ಮತ್ತು ಅವರ ಏಜೆಂಟರು, ಜಿಲ್ಲಾ ಚುನಾವಣಾ ಅಧಿಕಾರಿಗಳು / ರಿಟರ್ನಿಂಗ್ ಅಧಿಕಾರಿಗಳು / ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಗಮನಕ್ಕೆ ತರಬೇಕು.

## 10. ಮಾಧ್ಯಮಗಳಿಗೆ ಸಂಬಂಧಿಸಿದ ವಿಷಯಗಳು:

(**ಪರಿಚ್ಛೇದ 126 ರಂತೆ ಅಭಿಪ್ರಾಯ ಸಂಗ್ರಹ ಮತ್ತು ಎಕ್ಸಿಟ್ ಪೋಲ್):**

- **R.P. ಕಾಯಿದೆ**, **1951 ರ ಸೆಕ್ಷನ್ 126A ರ ಉಪ-ವಿಭಾಗ (1)** ರ ಅಡಿಯಲ್ಲಿ ಚುನಾವಣಾ ಆಯೋಗವು, ಸದರಿ ವಿಭಾಗದ ಉಪ-ವಿಭಾಗ (2) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ, ಪ್ರಸ್ತುತ ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ಆರಂಭವಾಗುವ 19ನೇ ಏಪ್ರಿಲ್, 2024 (ಶುಕ್ರವಾರ) ಬೆಳಿಗ್ಗೆ 7.00 ಗಂಟೆಯಿಂದ 7ನೇ ಹಂತ (ಕೊನೆಯ ಹಂತ) 1ನೇ ಜೂನ್, 2024 ರಂದು (ಶನಿವಾರ) ಸಂಜೆ 6.30 ರ ವರೆಗೆ ಮುದ್ರಣ ಅಥವಾ ವಿದ್ಯುನ್ಮಾನ ಮಾಧ್ಯಮ ಸೇರಿದಂತೆ ಯಾವುದೇ ಮಾಧ್ಯಮಗಳಲ್ಲಿ ಚುನಾವಣಾ ಸಮೀಕ್ಷೆಗಳು ಸೇರಿದಂತೆ ಮತದಾರರ ಮೇಲೆ ಪ್ರಭಾವ ಬೀರುವ ಯಾವುದೇ ರೀತಿಯ ಸಮೀಕ್ಷೆಗಳನ್ನು ಮಾಡಬಾರದು ಎಂದು ಮುದ್ರಣ, ವಿದ್ಯುನ್ಮಾನ ಮಾಧ್ಯಮಗಳಿಗೆ ತಿಳಿಸಿದೆ.

- **R.P. ಕಾಯಿದೆ 1951ರ ಪರಿಚ್ಛೇದ 126(1)(b)** ರಂತೆ ಯಾವುದೇ ಚುನಾವಣೆ ಕುರಿತು ಜನಾಭಿಪ್ರಾಯ ಸಂಗ್ರಹ, ಫಲಿತಾಂಶಗಳು ಅಥವಾ ಯಾವುದೇ ಇತರೆ ರೀತಿಯ ಸಮೀಕ್ಷೆಯ ಫಲಿತಾಂಶಗಳು ಸೇರಿದಂತೆ ಯಾವುದೇ ಚುನಾವಣಾ ವಿಷಯವನ್ನು ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರದರ್ಶಿಸುವುದು/ಪ್ರಕಟಿಸುವುದನ್ನು ದೇಶದಲ್ಲಿ ನಡೆಯುತ್ತಿರುವ ಒಟ್ಟು 7 ಹಂತಗಳ ಮತದಾನ ಮುಗಿಯುವವರೆಗೆ ನಿಷೇಧಿಸಲಾಗಿದೆ.

- **ಮಾಧ್ಯಮಗಳಿಗೆ ಸ್ವಯಂಪ್ರೇರಿತ ನೀತಿ ಸಂಹಿತೆ**:
- ಭಾರತ ಚುನಾವಣಾ ಆಯೋಗ ಚುನಾವಣಾ ಸಂದರ್ಭಗಳಲ್ಲಿ ಮಾಧ್ಯಮಗಳು ಪಾಲಿಸಬೇಕಾದ ಸ್ವಯಂಪ್ರೇರಿತ ನೀತಿ ಸಂಹಿತೆ ಕುರಿತಂತೆ ಆಯೋಗ ಪ್ರಕಟಿಸಿರುವ CEO ಮತ್ತು DEO ಗಳಿಗೆ ಮಾಧ್ಯಮ ವಿಷಯಗಳ ಕೈಪಿಡಿಯಲ್ಲಿ ಅಧ್ಯಾಯ 8 ರ ಪ್ಯಾರಾಗ್ರಾಫ್ 5 ರ ಪ್ರಕಾರ ನಿಯಮಗಳು ಮತ್ತು ಪಾಲಿಸಬೇಕಾದ ಮಾರ್ಗಸೂಚಿಗಳನ್ನು ತಿಳಿಸಿದೆ. ಚುನಾವಣೆಯಲ್ಲಿ ಮುಕ್ತ, ನ್ಯಾಯೋಜಿತ ಮತ್ತು ನೈತಿಕತೆಯನ್ನು ಕಾಪಾಡಲು, ಸಾಮಾಜಿಕ ಜಾಲತಾಣ ಮಾಧ್ಯಮಗಳ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಇಂಟರ್ನೆಟ್ ಮತ್ತು ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ(IAMAI) ಸಂಸ್ಥೆಯು ಕಳೆದ ಲೋಕಸಭೆ ಮತ್ತು ವಿಧಾನಸಭೆಗಳ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ "ಸ್ವಯಂಪ್ರೇರಿತ ನೀತಿ ಸಂಹಿತೆ" ಯನ್ನು ಅಳವಡಿಸಕೊಳ್ಳಲು ಒಪ್ಪಿಕೊಂಡಿದೆ. ಈ ಒಪ್ಪಂದವು ಕಳೆದ ಸಾರ್ವತ್ರಿಕ ಲೋಕಸಭೆ ಚುನಾವಣೆ ನಡೆದ 20.03.2019 ರಿಂದ ಜಾರಿಯಲ್ಲಿದೆ ಮತ್ತು ಸಾಮಾಜಿಕ ಜಾಲತಾಣ ಮಾಧ್ಯಮ ವೇದಿಕೆಗಳೊಂದಿಗೆ ಎಲ್ಲಾ ರೀತಿಯ ಸಂವಹನಕ್ಕಾಗಿ ಭಾರತ ಚುನಾವಣಾ ಆಯೋಗವು ನೋಡಲ್ ಕಛೇರಿಯಾಗಿರುವುದರಿಂದ ವಿಧಾನಸಭೆ ಚುನಾವಣೆಗಳು ಸೇರಿದಂತೆ ಎಲ್ಲಾ ಚುನಾವಣೆಗಳಿಗೆ ಇದು ಅನ್ವಯಿಸುತ್ತದೆ.

## 11. ಮುದ್ರಣ ಮಾಧ್ಯಮಕ್ಕಾಗಿ ರಾಜಕೀಯ ಜಾಹೀರಾತಿನ ಪೂರ್ವ-ಪ್ರಮಾಣೀಕರಣ:

ರಾಜ್ಯ ಮಟ್ಟದಲ್ಲಿ ಪಕ್ಷಗಳು/ಜಿಲ್ಲಾ ಮಟ್ಟದಲ್ಲಿ ಅಭ್ಯರ್ಥಿಗಳು ಆಯಾ MCMC ಸಮಿತಿಯ ಪೂರ್ವ-ಪ್ರಮಾಣೀಕರಣವಿಲ್ಲದೆ ಮತದಾನದ ದಿನ ಮತ್ತು ಚುನಾವಣಾ ಪೂರ್ವ ದಿನದಂದು ಮುದ್ರಣ ಮಾಧ್ಯಮದಲ್ಲಿ ಯಾವುದೇ ರಾಜಕೀಯ ಜಾಹೀರಾತುಗಳನ್ನು ಪ್ರಕಟಿಸುವುದನ್ನು ಭಾರತ ಚುನಾವಣಾ ಆಯೋಗ ನಿರ್ಬಂಧಿಸಿದೆ. ಚುನಾವಣೆಯ ಕೊನೆಯ ಹಂತದಲ್ಲಿ ಚುನಾವಣಾ ಪ್ರಕ್ರಿಯೆಗೆ ಧಕ್ಕೆಯಾಗದಂತೆ ಮುದ್ರಣ ಮಾಧ್ಯಮದ ಮೂಲಕ ಯಾವುದೇ ಪೂರ್ವಾನುಮತಿ ಇಲ್ಲದ ಅಥವಾ ತಪ್ಪುದಾರಿಗೆಳೆಯುವ ರಾಜಕೀಯ ಜಾಹೀರಾತುಗಳನ್ನು ತಪ್ಪಿಸಲು ಇದನ್ನು ಮಾಡಲಾಗಿದೆ.

## 12. ಮತಗಟ್ಟೆ ಹತ್ತಿರ ರಾಜಕೀಯ ಪಕ್ಷಗಳ ತಾತ್ಕಾಲಿಕ ಕಚೇರಿ:

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಸಾರ್ವತ್ರಿಕ / ಉಪ-ಚುನಾವಣೆಗಳ ಅವಧಿಯಲ್ಲಿ, ಸ್ವತಂತ್ರ ಅಭ್ಯರ್ಥಿಗಳು ಸೇರಿದಂತೆ ವಿವಿಧ ಪಕ್ಷಗಳ ಅಭ್ಯರ್ಥಿಗಳು ಮತದಾನದ ದಿನದಂದು ಚುನಾವಣಾ ಬೂತ್‌ಗಳನ್ನು (ತಾತ್ಕಾಲಿಕ ಕಚೇರಿಗಳು) ಮತಗಟ್ಟೆ ಹತ್ತಿರ ಸ್ಥಾಪಿಸುತ್ತಾರೆ ಮತ್ತು ನಿರ್ವಹಿಸುತ್ತಾರೆ. ಈ ನಿಟ್ಟಿನಲ್ಲಿ, ಆಯೋಗದ ನಿರ್ದೇಶನದಂತೆ ಕಟ್ಟುನಿಟ್ಟಾದ ಅನುಸರಣೆಗಾಗಿ ಈ ಕೆಳಗಿನ ನಿರ್ದೇಶನಗಳನ್ನು ನೀಡಲಾಗಿದೆ:

- ಮತದಾನ ಕೇಂದ್ರದಿಂದ 200 ಮೀಟರ್ ವ್ಯಾಪ್ತಿಯೊಳಗೆ ಯಾವುದೇ ಚುನಾವಣಾ ಬೂತ್ ಗಳನ್ನು ಸ್ಥಾಪಿಸಬಾರದು. ಒಂದೇ ಕಟ್ಟಡ/ ಸ್ಥಳ ಅಥವಾ ಆವರಣದಲ್ಲಿ ಒಂದಕ್ಕಿಂತ ಹೆಚ್ಚು ಮತಗಟ್ಟೆಗಳನ್ನು ಸ್ಥಾಪಿಸಿದ್ದರೂ ಸಹ, ಅಂತಹ ಆವರಣದಿಂದ 200 ಮೀಟರ್‌ಗಳಷ್ಟು ದೂರದಲ್ಲಿ ಅಭ್ಯರ್ಥಿಗಳು ತಮ್ಮ ಪಕ್ಷಗಳ ತಾತ್ಕಾಲಿಕ ಕಚೇರಿಗಳನ್ನು ತೆರೆಯಬಹುದಾಗಿದೆ.
- ಮತದಾನ ಕೇಂದ್ರದ ಆವರಣದ 200 ಮೀಟರ್ ಪರಿಧಿಯ ಹೊರಗಿನ ಜಾಗದಲ್ಲಿ ನೆರಳಿಗಾಗಿ ತಾತ್ಕಾಲಿಕ ಟೆಂಟ್ ಹಾಕಿಕೊಳ್ಳಬಹುದಾಗಿದೆ. ಪ್ರತಿ ಬೂತ್‌ಗಳಲ್ಲಿ ಕೇವಲ ಒಂದು ಟೇಬಲ್ ಮತ್ತು ಎರಡು ಕುರ್ಚಿಗಳನ್ನು ಮಾತ್ರ ಹಾಕಿರಬೇಕು.
- ಅಂತಹ ಬೂತ್‌ಗಳನ್ನು ಸ್ಥಾಪಿಸಲು ಇಚ್ಛಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಚುನಾವಣಾ ಅಧಿಕಾರಿಗೆ, ಅಂತಹ ಬೂತ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಮತಗಟ್ಟೆಗಳ ಹೆಸರುಗಳು ಮತ್ತು ಕ್ರಮ ಸಂಖ್ಯೆಗಳನ್ನು ಲಿಖಿತವಾಗಿ ಮತ್ತು ಮುಂಚಿತವಾಗಿ ತಿಳಿಸಬೇಕು. ಅವರು ಅಂತಹ ಬೂತ್‌ಗಳನ್ನು ಸ್ಥಾಪಿಸುವ ಮೊದಲು ಸಂಬಂಧಿತ ಸ್ಥಳೀಯ ಕಾನೂನುಗಳ ಅಡಿಯಲ್ಲಿ ಅನ್ವಯವಾಗುವಂತೆ ಸಂಬಂಧಿಸಿದ ಸರ್ಕಾರಿ ಅಧಿಕಾರಿಗಳು ಅಥವಾ ನಿಗಮಗಳು, ಪುರಸಭೆಗಳು, ಜಿಲ್ಲಾ ಪರಿಷತ್‌ಗಳು, ಪಟ್ಟಣ ಪ್ರದೇಶ ಸಮಿತಿಗಳು, ಪಂಚಾಯತ್ ಸಮಿತಿಗಳು ಮುಂತಾದ ಸ್ಥಳೀಯ ಪ್ರಾಧಿಕಾರಗಳ ಲಿಖಿತ ಅನುಮತಿಯನ್ನು ಪಡೆಯಬೇಕು. ಯಾವುದೇ ಸಂದರ್ಭದಲ್ಲಿ ಸಂಬಂಧಿತ ಅಧಿಕಾರಿಗಳು ವಿಚಾರಿಸಿದಾಗ ಪಡೆದಿರುವಅನುಮತಿ ಪತ್ರವನ್ನು ಸಾದರಪಡಿಸಬೇಕು.
  - ✓ ಸಾರ್ವಜನಿಕ ಅಥವಾ ಖಾಸಗಿ ಆಸ್ತಿಯನ್ನು ಯಾವುದೇ ಅತಿಕ್ರಮಣದ ಮಾಡದೇ ಆಯೋಗದ ವಿಶಾಲ ಮಾರ್ಗಸೂಚಿಯನ್ನು ಅನುಸರಿಸಬೇಕು:
  - ✓ ಯಾವುದೇ ಧಾರ್ಮಿಕ ಸ್ಥಳಗಳಲ್ಲಿ ಅಥವಾ ಆವರಣದಲ್ಲಿ ಇಂತಹ ಬೂತ್‌ಗಳನ್ನು ತೆರೆಯಬಾರದು.
  - ✓ ಯಾವುದೇ ಶಿಕ್ಷಣ ಸಂಸ್ಥೆಗಳು ಅಥವಾ ಆಸ್ಪತ್ರೆಗಳಿಗೆ ಹೊಂದಿಕೊಂಡಂತಿರುವ ಸ್ಥಳಗಳಲ್ಲಿ ಬೂತ್‌ಗಳನ್ನು ತೆರೆಯಬಾರದು.
  - ✓ ಇಂತಹ ಬೂತ್‌ಗಳು ಪಕ್ಷದ ಚಿಹ್ನೆಗಳು/ಛಾಯಾಚಿತ್ರಗಳೊಂದಿಗೆ ತಮ್ಮ ಪಕ್ಷದ ಒಂದು ಧ್ವಜ ಮತ್ತು ಬ್ಯಾನರ್ ಅನ್ನು ಮಾತ್ರ ಪ್ರದರ್ಶಿಸಬಹುದಾಗಿದೆ.
  - ✓ ಇಂತಹ ಬೂತ್‌ಗಳಲ್ಲಿ ಬಳಸುವ ಬ್ಯಾನರ್‌ನ ಗಾತ್ರವು 4 X 8 ಅಡಿಗಳನ್ನು ಮೀರಬಾರದು ಎಂಬ ಷರತ್ತಿಗೆ ಒಳಪಟ್ಟು ಸ್ಥಳೀಯ ಕಾನೂನುಗಳು ಬ್ಯಾನರ್ / ಹೋರ್ಡಿಂಗ್ ಇತ್ಯಾದಿಗಳಿಗೆ ಕಡಿಮೆ ಗಾತ್ರವನ್ನು ಸೂಚಿಸಿದರೆ, ಸ್ಥಳೀಯ ಕಾನೂನಿನಲ್ಲಿ ಸೂಚಿಸಲಾದ ಗಾತ್ರದ ನಿರ್ಬಂಧವು ಚಾಲ್ತಿಯಲ್ಲಿರುತ್ತದೆ.
  - ✓ ಬೂತ್‌ಗಳ ಸ್ಥಾಪನೆ ಮತ್ತು ಸಂಬಂಧಿಸಿದ ಚಟುವಟಿಕೆಗಳ ವೆಚ್ಚವನ್ನು ಅಭ್ಯರ್ಥಿಯ ಚುನಾವಣಾ ವೆಚ್ಚದ ಖಾತೆಗೆ ಹಾಕಲಾಗುತ್ತದೆ.

- ಇಂತಹ ಬೂತ್‌ಗಳನ್ನು ಮತದಾರರಿಗೆ ಕ್ರಮಸಂಖ್ಯೆ ಗುರುತಿಸಲು ಸಹಾಯವಾಗುವಂತ ಚೀಟಿಗಳನ್ನು ನೀಡುವ ಏಕೈಕ ಉದ್ದೇಶಕ್ಕಾಗಿ ಮಾತ್ರ ಬಳಸಬೇಕು. ಈ ಅನಧಿಕೃತ ಗುರುತಿನ ಚೀಟಿಗಳನ್ನು ಆಯೋಗದ ಸೂಚನೆಗಳಿಗೆ ಅನುಸಾರವಾಗಿ ಅಭ್ಯರ್ಥಿಯ ಹೆಸರು ಅಥವಾ ಚಿಹ್ನೆ ಅಥವಾ ರಾಜಕೀಯ ಪಕ್ಷದ ಹೆಸರಿಲ್ಲದೆ ಕಟ್ಟುನಿಟ್ಟಾಗಿ ಮುದ್ರಿಸಬೇಕು.
- ಯಾವುದೇ ಸಂದರ್ಭಗಳಲ್ಲಿ ಈ ಬೂತ್‌ಗಳಲ್ಲಿ ಯಾವುದೇ ಜನಸಂದಣಿಯಾಗದಂತೆ ನೋಡಿಕೊಳ್ಳಬೇಕು ಹಾಗೂ ಮತ ಚಲಾಯಿಸಿದವರು ಬೂತ್‌ಗೆ ಬರಲು ಅನುಮತಿ ಇರುವುದಿಲ್ಲ. ಇದನ್ನು ಅವರ ಎಡಗೈ ತೋರುಬೆರಳಿನ ಮೇಲೆ ಅಳಿಸಲಾಗದ ಶಾಯಿ ಗುರುತು ಅಥವಾ ಆ ಚುನಾವಣೆಗೆ ನಿರ್ದಿಷ್ಟವಾಗಿ ಸೂಚಿಸಿದಂತೆ ಯಾವುದೇ ಇತರ ಬೆರಳಿನಿಂದ ಸ್ಪಷ್ಟಪಡಿಸಿಕೊಳ್ಳಬೇಕು.
- ಮತಗಟ್ಟೆಗಳನ್ನು ನಿರ್ವಹಿಸುವ ವ್ಯಕ್ತಿಗಳು ಮತದಾರರು ಮತಗಟ್ಟೆಗಳಿಗೆ ತೆರಳುವ ಮಾರ್ಗದಲ್ಲಿ ಯಾವುದೇ ಅಡೆತಡೆಗಳನ್ನು ಉಂಟುಮಾಡಬಾರದು ಅಥವಾ ಇತರ ಅಭ್ಯರ್ಥಿಗಳ ಬೂತ್‌ಗಳಿಗೆ ಹೋಗುವುದನ್ನು ತಡೆಯಬಾರದು ಅಥವಾ ಮತದಾರರು ತಮ್ಮ ಹಕ್ಕು ಚಲಾಯಿಸುವ ಸಂದರ್ಭದಲ್ಲಿ ಯಾವುದೇ ರೀತಿಯ ಅಡೆತಡೆಗಳನ್ನು ಸೃಷ್ಟಿಸಬಾರದು. ಅವರ ಸ್ವಂತ ಇಚ್ಛೆಯ ಪ್ರಕಾರ. ಹೆಚ್ಚು ನಿರ್ದಿಷ್ಟವಾಗಿ ಹೇಳುವುದಾದರೆ, ಯಾವುದೇ ಮತದಾರರು ನಿರ್ದಿಷ್ಟ ಬೂತ್‌ನಿಂದ ಅನಧಿಕೃತ ಗುರುತಿನ ಚೀಟಿಯನ್ನು ಸಂಗ್ರಹಿಸಲು ಅಥವಾ ಅವರ ಸ್ವಂತ ಇಚ್ಛೆಯಿಂದ ಅಂತಹ ಬೂತ್‌ಗೆ ಬಂದರೆ, ಸ್ಪರ್ಧಿಸುವ ಯಾವುದೇ ಪಕ್ಷ / ಅಭ್ಯರ್ಥಿಯ ಪರವಾಗಿ ಅಥವಾ ವಿರುದ್ಧವಾಗಿ ಮತ ಚಲಾಯಿಸಲು ಯಾವುದೇ ರೀತಿಯಲ್ಲಿ ಪ್ರಭಾವ ಬೀರುವುದನ್ನು ನಿಷೇಧಿಸಲಾಗಿದೆ.
- ಮೇಲಿನ ನಿರ್ದೇಶನಗಳ ಯಾವುದೇ ಉಲ್ಲಂಘನೆಯನ್ನು ಆಯೋಗವು ಅತ್ಯಂತ ಕಠಿಣವಾಗಿ ವೀಕ್ಷಿಸುತ್ತದೆ ಮತ್ತು ಕಾನೂನಿನಡಿಯಲ್ಲಿ ಸಾಧ್ಯವಿರುವ ಅತ್ಯಂತ ಕಠಿಣ ಕ್ರಮಗಳನ್ನು ಒಳಗೊಂಡಿರುತ್ತದೆ, ಯಾವುದೇ ಅವಘಡಗಳಾದಲ್ಲಿ ತಕ್ಷಣವೇ ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ಉಲ್ಲಂಘನೆಗಳಿಗೆ ಜವಾಬ್ದಾರರಾಗಿರುತ್ತಾರೆ.
- ಮತದಾನದ ದಿನಾಂಕದಂದು ಮತಗಟ್ಟೆಗಳ ಸುತ್ತಲಿನ 200 ಮೀಟರ್ ಪ್ರದೇಶದಲ್ಲಿ ಯಾವುದೇ ಚುನಾವಣಾ ಪ್ರಚಾರವನ್ನು ನಿರ್ಬಂಧಿಸಲಾಗಿದೆ.

**13. ಮತಗಟ್ಟೆಗಳಲ್ಲಿ ಬಿಸಿಲಿನ ತಾಪವನ್ನು ನೀಗಿಸಲು ಮತದಾರರಿಗೆ ಅನುಕೂಲವಾಗುವಂತೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:**

- ಮತಗಟ್ಟೆಗಳಲ್ಲಿ ಎಲ್ಲಾ ಕನಿಷ್ಠ ಸೌಲಭ್ಯಗಳಾದ ರಾಂಪ್ ಸೌಲಭ್ಯ, ಕುಡಿಯುವ ನೀರು, ವಿದ್ಯುತ್, ಪೀಠೋಪಕರಣಗಳು, ಪುರುಷರು ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಮತ್ತು ಮತದಾರರಿಗೆ ಸಹಾಯವಾಗಲು ಸಂಕೇತ ಫಲಕಗಳನ್ನು ಅಳವಡಿಸಲಾಗಿದೆ.
- ಮತಗಟ್ಟೆಯ ಅಕ್ಕಪಕ್ಕದ ಕೊಠಡಿಗಳನ್ನು ವಿಶ್ರಾಂತಿ ಕೊಠಡಿಗಳನ್ನಾಗಿ ಮಾರ್ಪಡಿಸಿ ಸಿದ್ಧವಿರಿಸಲಾಗಿದೆ.
- ಮತಗಟ್ಟೆ ಆವರಣದಲ್ಲಿ ಶಾಮಿಯಾನ, ಫ್ಯಾನ್ ಮತ್ತು ಆಸನದ ವ್ಯವಸ್ಥೆ ಮಾಡಲಾಗಿದೆ.
- ಮತಗಟ್ಟೆ ಆವರಣದಲ್ಲಿ ಶುಶ್ರೂಷಕರು/ ಆಶಾ ಕಾರ್ಯಕರ್ತರೊಂದಿಗೆ ORS / ವೈದ್ಯಕೀಯ ಕಿಟ್‌ಗಳನ್ನು PS/ PSL ನಲ್ಲಿ ವ್ಯವಸ್ಥೆ ಮಾಡಲಾಗಿದೆ.
- ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ತುರ್ತು ಸಂದರ್ಭಗಳಲ್ಲಿ ಆಂಬ್ಯುಲೆನ್ಸ್ ಸೇವೆಯ ಸೌಲಭ್ಯವಿರುತ್ತದೆ.

******